ಅಂತಹುದೇ ಕುಷನ್ ಹೊದಿಸಿದ ಮರದ ಹಲಗೆಗಳು. ಹಾಗೆ ಸುಮಾರು ಹತ್ತು ಸೀಟುಗಳು. ಒಂದೊಂದು ಸಾಲಿನಲ್ಲೂ ಎರಡರಂತೆ. ಆ ಆಸನಗಳ ಮೇಲೆ ಕೆಂಪು ಫ್ಲೋರಸೆಂಟ್ ಲೈಫ್ ಜಾಕೆಟ್ಟುಗಳು.

ತೆಂಬಲಿಂಗ್ ಸುಮಾರು 430 ಕಿ.ಮೀ. ಹರಿಯುವ ನದಿಯಾದರೂ ನಾನು ಮಧ್ಯೆ ಇಳಿದುಕೊಳ್ಳಬೇಕಾದ ತಮನ್ ನೆಗಾರಾಕ್ಕೆ ಮೂರುವರೆ ತಾಸಿನ ಪ್ರಯಾಣ. ಮೂರು ಗಂಟೆ ಬಸ್ಸಿನಲ್ಲಿ ಹೋಗಬಹುದಾಗಿದ್ದರೂ, ಆಯ್ದುಕೊಂಡದ್ದು ಬೋಟ್. ರಸ್ತೆಯ ಪ್ರಯಾಣ ಎಂದಿಗೂ ಇದ್ದದೇ. ಬೋಟಿನ ಪಯಣ ಹೊಸದಲ್ಲದಿದ್ದರೂ ಅಪರೂಪಕ್ಕೆ ಸಿಗುವಂತಹದ್ದು. ನೀರಿನ ಮೇಲೆ ಹೋಗುವ ರೋಚಕ ಗಳಿಗೆಗಳನ್ನು ಕಳೆದುಕೊಳ್ಳಬೇಕೆನಿಸಲಿಲ್ಲ.

ಗುಡ್ಡಗಾಡಿನ ಮೂರು ಹೆಂಗಸರು ಸಹ ಹತ್ತಿಕೊಂಡರು. ಅವರವರ ಲಗೇಜುಗಳನ್ನು ಬೋಟಿನಲ್ಲಿ ಒಂದು ಜಾಗ ತೋರಿಸಿ ಇಡಲು ಹೇಳಿದ ಡ್ರೈವರ್. ನಾನು ನನ್ನ ಕ್ಯಾಮೆರಾ ಬ್ಯಾಗು, ನೀರಿನ ಬಾಟಲಿ, ಚಿಕ್ಕಿ, ಚಾಕೋಲೇಟ್, ವೇಫರುಗಳಿದ್ದ ಸಣ್ಣ ಚೀಲವನ್ನು ಕೈಗೆತ್ತಿಕೊಂಡು ಒಂದು ಜಾಗ ಹಿಡಿದು ಕುಳಿತೆ. ಬೋಟಿನ ತಳದಲ್ಲಿ ಕಾಲು ಮಡಚಿಕೊಂಡು ಕೂರಬೇಕು. ಲಗೇಜಿನ ಮೇಲೆ ಒಂದು ದಪ್ಪ ನೀಲಿಯ ಪ್ಲಾಸ್ಟಿಕ್ ಶೀಟನ್ನು ಡ್ರೈವರ್ ಮತ್ತು ಅವನ ಸಹಾಯಕ ಸೇರಿ ಹೊದಿಸಿ ಪ್ಲಾಸ್ಟಿಕ್ ಹಗ್ಗದಿಂದ ಕಟ್ಟಿದರು. ಬೋಟಿನ ವೇಗಕ್ಕೆ, ಅಲೆಗಳ ಏರಿಳಿತಕ್ಕೆ ನೀರು ಬೋಟಿನೊಳಗೆ ನುಗ್ಗಿ ಲಗೇಜುಗಳು ತೊಯ್ಯದಿರಲು ಈ ವ್ಯವಸ್ಥೆ. ಎಲ್ಲರಿಗೂ ಅಲ್ಲಿದ್ದ ಲೈಫ್ ಜಾಕೆಟ್ಟನ್ನು ಹಾಕಿಕೊಳ್ಳಲು ಡ್ರೈವರ್ ಹೇಳಿದ. ಎಲ್ಲರೂ ಕುಳಿತಿರುವುದನ್ನು ಖಾತ್ರಿಮಾಡಿಕೊಂಡು, ಬೋಟಿನ ಮುಂದೆ ಮೋಟಾರಿದ್ದ ಸ್ವಲ್ಪ ಎತ್ತರವಾದ ಆಸನದಲ್ಲಿ ಕುಳಿತು, ಎಂಜಿನನ್ನು ಸ್ಟಾರ್ಟ್ ಮಾಡಿದ. ಸಹಾಯಕ, ಕಂಬಕ್ಕೆ ಕಟ್ಟಿದ್ದ ಬೋಟಿನ ಹಗ್ಗವನ್ನು ಬಿಚ್ಚಿ, ಜಿಗಿದು, ಬೋಟಿನ ಹಿಂಬದಿಯಲ್ಲಿ ಕುಳಿತು, ಹಗ್ಗವನ್ನು ಕೈಗೆ ಸುತ್ತಿಕೊಳ್ಳುತ್ತ, ಮಲಯ್ ಭಾಷೆಯಲ್ಲಿ ಡ್ರೈವರಿಗೆ ಹೊರಡಲು ಸೂಚನೆ ಕೊಟ್ಟ.

ಬೋಟು ಮಂದ ಗತಿಯಿಂದ ಕ್ರಮೇಣ ವೇಗವನ್ನು ಹೆಚ್ಚಿಸುತ್ತ ಹೋಯಿತು. ನದಿಯ ನೀರು ಮಣ್ಣಿನ ಬಣ್ಣದಲ್ಲಿತ್ತು. ಎರಡೂ ದಡಗಳಲ್ಲಿ ದಟ್ಟ ಕಾಡುಗಳು. ಎತ್ತರದ ಮರಗಳು. ಹಚ್ಚ ಹಸಿರು. ನದಿ ಬಹಳ ಅಗಲವಾಗಿತ್ತು, ಆಳವಾಗೂ ಇರಬಹುದು. ಗಾಳಿಯಲ್ಲಿ ತುಂಬ ತೇವವಿತ್ತು. ಬೋಟಿನ ವೇಗ ಹೆಚ್ಚಿದಂತೆ ನನ್ನ ಆಡ್ರಿನಲಿನ್ ರಶ್ ಅಧಿಕವಾಯಿತು. ಪಯಣ ಹೆಚ್ಚು ರೋಚಕವಾಯಿತು. ಸುತ್ತಲಿನ ಸೌಂದರ್ಯವನ್ನು ಸವಿಯುತ್ತಾ, ಸಿಕ್ಕ ದೃಶ್ಯಗಳನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯುತ್ತಿದ್ದೆ. ಅಲೆಗಳು ಏಳುವಾಗಲೆಲ್ಲಾ ಬೋಟು ಮೇಲೆ ಕೆಳಗೆ, ಬೆಂಗಳೂರಿನ ರಸ್ತೆಯ ಹಂಪುಗಳ ಮೇಲೆ ಏರಿಳಿದಂತೆ, ಸೀಟಿನಿಂದ ಸ್ವಲ್ಪ ಮೇಲೆ ಎದ್ದುಬಿದ್ದು ಕೂರುತ್ತಿದ್ದೆವು. ಆಗೆಲ್ಲ ನದಿಯ ನೀರು ಮೈಮೇಲೆಲ್ಲ ಎರಚಿ, ಒದ್ದೆಯಾಗುತ್ತಿತ್ತು. ಅಲೆ ಬರುವಾಗಲೆಲ್ಲ, ಡ್ರೈವರ್ ಬೋಟಿನ ವೇಗವನ್ನು ಹೆಚ್ಚಿಸುತ್ತಿದ್ದ. ಬೋಟಿನಲ್ಲಿದ್ದವರೆಲ್ಲ ಓ ಎಂದು ಜೋರಾಗಿ ಹರ್ಷದಿಂದ ಕೂಗುತ್ತಿದ್ದರು. ಆಗ ಡ್ರೈವರ್ ಮತ್ತು ಸಹಾಯಕ ಇಬ್ಬರೂ ಗಹಗಹಿಸಿ ನಗುತ್ತಿದ್ದರು. ಬೋಟಿನ ವೇಗಕ್ಕೆ ತಕ್ಕಂತೆ ನಮ್ಮ 'ಓ'ವಿನ ಸ್ಥಾಯಿ ಏರಿಳಿಯುತ್ತಿತ್ತು. ಡ್ರೈವರನ್ನು ಹುರಿದುಂಬಿಸಲು ಅಲೆ ಏಳುವಾಗೆಲ್ಲ ಆದಷ್ಟು ಜೋರಾಗಿ ಓ ಕೂಗುತ್ತಿದ್ದೆವು. ಬೋಟಿನಲ್ಲಿದ್ದವರೆಲ್ಲ ಮಕ್ಕಳಾಗಿದ್ದೆವು. ಕೆಲವೊಮ್ಮೆ ಆ ವೇಗ ನನಗೆ ಭಯ ಉಂಟುಮಾಡಿದರೂ, ಆ ಭಯವನ್ನು ಮರೆಯಲು ಯತ್ನಿಸಿದೆ. ನಮ್ಮ ಎದುರಿಗೋ, ಹಾದೋ ಮತ್ತೊಂದು ಬೋಟು ಹೋದರೆ, ಅದರಲ್ಲಿ ಕುಳಿತಿರುವವರಿಗೆ ಕೈಬೀಸುತ್ತಾ, ಓ ಎಂದು ಕೂಗಿ, ಅವರನ್ನೂ ಹಾಗೆ ಕೂಗಲು ಹುರಿದುಂಬಿಸುತ್ತಾ ಸಾಗಿತ್ತು ಆ ಮೂರುವರೆ ತಾಸಿನ ಪಯಣ.